6. ಗ್ಯಾಲರಿಯಿಂದ ಕೆಲವು ಪ್ರೇಕ್ಷಕರಿಂದ ಕರಪತ್ರಗಳನ್ನು ಎಸೆದ ಪ್ರಕರಣ.

(ಈ ಹಂತದಲ್ಲಿ ಗ್ಯಾಲರಿಯಲ್ಲಿದ್ದ ಕೆಲವು ಪ್ರೇಕ್ಷಕರು ಕರಪತ್ರಗಳನ್ನು ಎಸೆದು ಕೂಗಾಡುತ್ತಿದ್ದರು)

7. ಗಮನ ಸೆಳೆಯುವ ಸೂಚನೆಗಳು :

ವಿಷಯ (ಅ): ಡಾಂಬರು, ಸಿಮೆಂಟ್ ಮತ್ತು ಕಬ್ಬಿಣದ ಬೆಲೆಗಳ ಏರಿಕೆಯಿಂದ ಈಗಾಗಲೇ ಟೆಂಡರ್ ಆಗಿರುವ ಕಾಮಗಾರಿಗಳ ಕೆಲಸ ವಿಳಂಬವಾಗಿರುವ ಬಗ್ಗೆ. ಮುಂದುವರೆದುದು.

ಶ್ರೀ ಎನ್. ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ...

ಅಧ್ಯಕ್ಷರು: ಮಾನ್ಯ ಶ್ರೀ ಠಾಮರೆಡ್ಡಿಯವರೇ, ಇದರ ಬಗ್ಗೆ ಆರಂಭ ಮಾಡಿ...

ಶ್ರೀ ಎನ್. ಧರ್ಮಸಿಂಗ್: ಹಿರಿಯ ಸದಸ್ಯರಾದ ಮಾನ್ಯ ರಮೇಶ್ ಕುಮಾರ್‌ರವರು ಹಾಗೂ ಇತರ ಸದಸ್ಯರು ಈಗಾಗಲೇ ಮಾತನಾಡಿದ್ದಾರೆ. ಈಗ ಗಮನ ಸೆಳೆಯುವ ಸೂಚನೆ ಅಜೆಂಡಾದಲ್ಲಿ ಇದೆ. ಯಾರ ಕಡೆಯಿಂದಲೂ ಉತ್ತರ ಬಂದಿಲ್ಲ.....

ಶ್ರೀ ಕೆ.ಎಸ್. ಈಶ್ವರಪ್ಪ: ಗಮನ ಸೆಳೆಯುವ ಸೂಚನೆಯನ್ನು ಯಾರು ಕೇಳಬೇಕಾಗಿತ್ತೋ ಅವರೇ ಈಗ ಇಲ್ಲಿ ಇಲ್ಲ. ಮಾನ್ಯ ಡಿ.ಕೆ. ಶಿವಕುಮಾರ್‌ರವರು ಇಲ್ಲಿ ಇಲ್ಲ. ಉತ್ತರ ಹೇಳುವುದಕ್ಕೆ ನಾನು ತಯಾರಿದ್ದೇನೆ. ಈಗ ಅವರು ಬಂದು ಕೇಳಲಿ. ನಾನು ಹೇಳುವುದಕ್ಕೆ ತಯಾರಿದ್ದೇನೆ.

ಅಧ್ಯಕ್ಷರು: ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು): ಅಜೆಂಡಾ ಹಾಕತಕ್ಕಂಥ ಕಾಲದಲ್ಲಿ ಅದರಲ್ಲಿ ಗಮನ ಸೆಳೆಯುವ ಸೂಚನೆಯನ್ನೂ ಕೂಡ ಹಾಕಿದ್ದಾರೆ. ಅದಕ್ಕೆ ಉತ್ತರ ತರಿಸಿಕೊಡತಕ್ಕಂಥದ್ದು ತಮ್ಮ ಜವಾಬ್ದಾರಿ. ಯಾರು ಗಮನ ಸೆಳೆಯುವ ಸೂಚನೆ ಹಾಕುತ್ತಾರೆ. ಅವರಿಗೆ ಒಂದು ಉತ್ತರದ ಪ್ರತಿ ಹೋಗಬೇಕಾಗುತ್ತದೆ. ಮಾನ್ಯ ರೇವಣ್ಣನವರು ಇವತ್ತು ಉತ್ತರ ಕೊಡಲಿಕ್ಕೆ ಇಲ್ಲಿ ನಿಂತಿದ್ದರು. ಆದರೆ ಅದರ ಪ್ರತಿ ಯಾರಿಗೂ ಸಿಗಲಿಲ್ಲ. ಗಮನ ಸೆಳೆಯುವ ಸೂಚನೆ ಪ್ರಸ್ತಾಪ ಮಾಡಿದಾಗ it will become the property of the House...

ನಮಗೂ ಹಾಗೂ ಎಲ್ಲಾ ಸದಸ್ಯರಿಗೂ ಕೂಡ ಉತ್ತರದ ಪ್ರತಿ ಬೇಕಾಗುತ್ತದೆ. ಇದು ಯಾವುದೂ ಸರಿಯಾದ ರೀತಿಯಲ್ಲಿ ಆಗಿಲ್ಲ. ನೀವು ಏನೋ ಒತ್ತಡದ ಮೇಲೆ ಯಾರ್ಯಾದರೋ ಗಮನ ಸೆಳೆಯುವ ಸೂಚನೆ ಹಾಕಿಕೊಂಡಿದಿರಿ. ಮತ್ತೊಂದು ಅಂಶ ಏನೆಂದರೆ, ನೀರಾವರಿ ಸಚಿವರು ಇವತ್ತು ಏನು ಹೇಳಿದರು ಅದು ಹೇಳತಕ್ಕಂಥದ್ದಲ್ಲ. ನನಗೆ ಮತ್ತು ಶಿವಕುಮಾರ್‌ರವರಿಗೆ ಮಾತುಕತೆಯಾಗಿದೆ, ನಿಮಗೆ ಮಾತುಕತೆ ಸಪರೇಟ್ ಇರಬಹುದು, ಗಮನ